ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದ

ವಾರ್ತಾಪತ್ರ

(ತ್ರೈಮಾಸಿಕ ಪತ್ರಿಕೆ)

ಸಂಪುಟ : ೦೨
ಸಂಚಿಕೆ : ೦೪ ೮

(ಖಾಸಗಿ ಪ್ರಸಾರಕ್ಕಾಗಿ ಮಾತ್ರ) ಅಕ್ಟೋಬರ್ – ಡಿಸೆಂಬರ್ ೨೦೦೮

ಸಂಪಾದಕರು
ಎಸ್.ವಿ. ಶ್ರೀನಿವಾಸರಾವ್

ಪರಿವಿಡಿ


೧. ಪ್ರಾತಃ ಸ್ಮರಣೀಯ ಸಾಹಿತಿಗಳು
೨. ಸಂಪಾದಕೀಯ / ೨
೩. ಪ್ರತಿಷ್ಠಾನದ ವಾರ್ತೆ / ೪
೪. ಪ್ರತಿಷ್ಠಾನದ ಪ್ರಕಟಣೆಗಳು / ೬
೫. ಅಭಿನಂದನೆಗಳು / ೭
೬. ಗ್ರಂಥ ಪರಿಚಯ /೭-೮

ವಿಳಾಸ
ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ
ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರ
ಬಿ.ಎಂ.ಶ್ರೀ. ಕಲಾಭವನ,
೩ನೇ ಮುಖ್ಯರಸ್ತೆ
ನರಸಿಂಹರಾಜ ಕಾಲೋನಿ
ಬೆಂಗಳೂರು – ೧೯
ದೂರವಾಣಿ : ೨೬೬೧೩೫೮೭೭

ಶಾಖೆ
ಬಿ.ಎಂ.ಶ್ರೀ. ಶತಮಾನೋತ್ಸವ ಭವನ
ಬೆಳ್ಳೂರು, ನಾಗಮಂಗಲ ತಾ॥, ಮಂಡ್ಯ ಜಿಲ್ಲೆ

೧೯೦೮-೨೦೦೮ ದಶಕದ ಪ್ರಾತಃಸ್ಮರಣೀಯ ಸಾಹಿತಿಗಳಿಗೆ ನಮನಗಳು

ಶತಮಾನೋತ್ಸವ ಆಚರಣೆಗೆ ೨೦೦೮ರಲ್ಲಿ ಪಾತ್ರರಾಗಿರುವ ಗಣ್ಯಸಾಹಿತಿಗಳೆಂದರೆ ಡಾ. ಜಿ.ಪಿ. ರಾಜರತ್ನಂ, ಡಾ. ಅ.ನ.ಕೃಷ್ಣರಾಯ, ನಾಡಿಗೇರ ಕೃಷ್ಣರಾವ್, ಡಾ. ಎಸ್. ಕರೀಂ ಖಾನ್, ಬಿ. ಸದಾಶಿವಯ್ಯ, ರಾಜಾರಾವ್ ಮುಂತಾದವರು. ಈ ಖ್ಯಾತಿವಂತ ಪ್ರಾತಃಸ್ಮರಣೀಯರ ಅಮೂಲ್ಯ ಕೊಡುಗೆಗಳನ್ನು ನೆನೆದು, ಮೆಚ್ಚುಗೆಯನ್ನು ಸೂಚಿಸುವ ಮೂಲಕ ಅವರ ದಿವ್ಯ ಆತ್ಮಕ್ಕೆ ಚಿರಶಾಂತಿಯನ್ನು ಕೋರೋಣ. ಗೌರವಾರ್ಪಣೆಯನ್ನು ಸಲ್ಲಿಸೋಣ.



ಡಾ. ಜಿ.ಪಿ. ರಾಜರತ್ನಂ: ಜೀವಿತಕಾಲ : (೮/೧೨/೧೯೦೮ ೧೩/೩/೧೯೭೯)

ಈ ಗುಂಡ್ಲು ಪಂಡಿತ ರಾಜೈಯ್ಯಂಗಾರ್ ಅವರು ರಾಮನಗರದ ಗೋಪಾಲ ಕೃಷ್ಣಯ್ಯಂಗಾರ್ ಅವರ ಸುಪುತ್ರ, ಪ್ರತಿಭಾನ್ವಿತ ವಿದ್ಯಾರ್ಥಿಯಾಗಿ, ಉಪಾಧ್ಯಾಯರಾಗಿ, ಉಪನ್ಯಾಸಕರಾಗಿ ಇವರು ಶೈಕ್ಷಣಿಕ ಕ್ಷೇತ್ರಕ್ಕೆ ಅನನ್ಯ ಸೇವೆಯನ್ನು ಸಲ್ಲಿಸಿರುವುದಲ್ಲದೆ ಸಾಹಿತ್ಯ ಕ್ಷೇತ್ರಕ್ಕೆ, ಕಥೆ, ಕಾದಂಬರಿ, ಕಾವ್ಯ, ನಾಟಕ, ಮಕ್ಕಳ ಸಾಹಿತ್ಯ, ಅನುವಾದ ಸಾಹಿತ್ಯ, ಪ್ರಬಂಧ ಮುಂತಾದ ವಿಭಾಗಗಳಲ್ಲಿ ಅಮೂಲ್ಯ ಕೊಡುಗೆಗಳನ್ನು ನೀಡಿ ಸಂಪನ್ನಗೊಳಿಸಿದ್ದಾರೆ. ದೇವರಾಜ ಬಹದ್ದೂರ್ ಪಾರಿತೋಷಕ, ರಾಜ್ಯ ಸಾಹಿತ್ಯ ಅಕಾಡೆಮಿ ಬಹುಮಾನ (೧೯೬೯), ರಾಜ್ಯೋತ್ಸವ ಪುರಸ್ಕಾರ (೧೯೭೦), ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ (೧೯೭೮) ಮುಂತಾದವಕ್ಕೆ ಭಾಜನರಾಗಿದ್ದಾರೆ. ಇವರು ಶಿಶು ಸಾಹಿತ್ಯಕ್ಕೆ ನೀಡಿರುವಷ್ಟು ಕೊಡುಗೆಗಳನ್ನು ಇನ್ನಾರೂ ನೀಡಿಲ್ಲವೆಂದರೆ ಅತಿಶಯೋಕ್ತಿಯಾಗಲಾರದು.

ಕಥೆ, ಕವನ, ನಾಟಕ, ಚುಟುಕಗಳನ್ನು ರಚಿಸಿರುವುದಲ್ಲದೆ ಬೇರೆ ಭಾಷೆಯ ಉತ್ತಮ ಕಥೆ, ಜೀವನ ಚರಿತ್ರೆ ಮುಂತಾದವನ್ನೂ ನೂರಾರು ಸಂಖ್ಯೆಯಲ್ಲಿ ಕನ್ನಡಕ್ಕೆ ಅನುವಾದಿಸಿದ್ದಾರೆ. ಕಥಾ ಸಂಕಲನಗಳು ೫೦ಕ್ಕೂ ಮೀರಿವೆ. ಬೌದ್ಧ ಸಾಹಿತ್ಯ, ಜೈನ ಸಾಹಿತ್ಯ, ವಿಷ್ಣುಭಕ್ತಿ ಸಾಹಿತ್ಯ, ಗಾಂಧಿ ಸಾಹಿತ್ಯ ಕಣಜದಿಂದ ನೂರಾರು ಮುತ್ತಿನಂಥಾ ಕಥೆಗಳನ್ನು ಆಯ್ದು ಹೊರತೆಗೆದಿದ್ದಾರೆ. ೬೪ ಕಥೆಗಳ 'ಕಥಾಕೋಶ' ಅತ್ಯುತ್ತಮ ಕಥೆಗಳ ಸಂಕಲನ. 'ರತ್ನನ ಪದಗಳು', ಬುದ್ಧವಚನ ಪರಿಚಯ, ಕಂದನ ಕಾವ್ಯಮಾಲೆ, ಕಡಲೆಪುರಿ, ತುತ್ತೂರಿ, ಮುದ್ದುಕೃಷ್ಣ, ಕಳ್ಳರಂಗಪ್ಪ, ಪೋಲಿ ಸುಬ್ಬಣ್ಣ, ಪಂಚ ತಂತ್ರ ಕಥೆಗಳು, ಜಯವಿಜಯರ ಕಥೆಗಳು, ಗೋಳೂರಿನ ಗಾಯಕರು ಮುಂತಾಗಿ ನೂರಾರು ಕೃತಿಗಳನ್ನು ರಚಿಸಿದ್ದಾರೆ. ಗ್ರಂಥಗಳನ್ನು ಹೋದೆಡೆಗೆಲ್ಲಾ ಹೊತ್ತು ಮಾರಾಟ ಮಾಡಿದ್ದಾರೆ. ಸಾಹಿತ್ಯ ಕ್ಷಿತಿಜದಲ್ಲಿ ಧೃವತಾರೆಯಾಗಿ ಪ್ರಕಾಶಿಸುತ್ತಿದ್ದಾರೆ.



ಡಾ. ಅ.ನ.ಕೃಷ್ಣರಾಯ : (ಜೀವಿತಕಾಲ : ೯/೫/೧೯೦೮ ೮/೭/೧೯೭೧.) ಜನ್ಮಸ್ಥಳ ಕೋಲಾರ. ಅರಕಲಗೂಡಿನ ತಂದೆ ನರಸಿಂಗರಾಯ ತಾಯಿ ಅನ್ನಪೂರ್ಣಮ್ಮನವರ ಸುಪುತ್ರ, ಇವರು ಯಾವ ವಿಶ್ವವಿದ್ಯಾಲಯದಲ್ಲೂ ಓದಿ ಪದವಿ ಗಳಿಸದೆ ಇದ್ದರೂ ಅವರ ವಿದ್ವತ್ಪೂರ್ಣ ಅಪೂರ್ವ ಕೊಡುಗೆಗಳಿಂದಾಗಿ ಮೈಸೂರು ವಿಶ್ವವಿದ್ಯಾಲಯ ಗೌರವ ಡಾಕ್ಟರೇಟ್ ನೀಡಿ ಪುರಸ್ಕರಿಸಿದೆ. ಈ

(ಪುಟ ೩ ನೋಡಿ)

ಸಂಪಾದಕೀಯ..............

ಹುಟ್ಟುಹಬ್ಬ ಆಚರಣೆ ಪ್ರಾಚೀನ ಕಾಲದಿಂದ ನಡೆದುಕೊಂಡು ಬಂದಿರುವ ಸಂಭ್ರಮ ಪಡುವ ಒಂದು ಕೌಟುಂಬಿಕ ಕಾರ್ಯಕ್ರಮ. ಹಿಂದೆ ಇದು ಮಕ್ಕಳಿಗೆ ಸೀಮಿತವಾಗಿತ್ತು. ಹುಟ್ಟಿದ ದಿನ ಮಕ್ಕಳಿಗೆ ಎಣ್ಣೆ ಒತ್ತಿ ಅಭ್ಯಂಜನಸ್ನಾನ ಮಾಡಿಸಿ ಅವರಿಂದ ದೇವರಿಗೆ ತುಪ್ಪದ ದೀಪ ಹಚ್ಚಿಸಿ ಮನೆಯಲ್ಲಿ ಪಾಯಸ ಹಾಗೂ ಸಿಹಿತಿಂಡಿ ಮಾಡಿ ಬಂಧು ಬಳಗ ಸೇರಿ ಮಗುವಿಗೆ ಆಶೀರ್ವಾದ ಮಾಡಿ ನಲಿಯುತ್ತಿದ್ದ ಸಂಪ್ರದಾಯಆಚರಣೆ. ಇದೀಗ ಈ ಖಾಸಗೀ ಕಾರ್ಯಕ್ರಮ ಬಹಳ ಬದಲಾವಣೆಗೆ ಒಳಗಾಗಿದೆ. ಪಾಶ್ಚಾತ್ಯ ಪ್ರಭಾವಕ್ಕೆ ಒಳಗಾಗಿದೆ. ತುಪ್ಪದ ದೀಪ ಹಚ್ಚುವಲ್ಲಿ ಈಗ ಮೇಣದ ಬತ್ತಿಯನ್ನು ಊದಿ ಆರಿಸುವ ಅರ್ಥಹೀನ ಪದ್ಧತಿ ಬಂದಿದೆ. ಪಾಯಸ, ತಂಬಿಟ್ಟು, ಗುಲಪಾವಟೆ, ರವೆಉಂಡೆಯ ಬದಲಿಗೆ ಕೇಕ್, ರಸಗುಲ್ಲಾ ಪೇಸ್ಟ್ರಿ, ಚಾಕಲೇಟ್, ಐಸ್‌ಕ್ರೀಂ ಆಕ್ರಮಿಸಿಕೊಂಡಿವೆ. ಈ ಆಚರಣೆಯ ಹಿಂದೆ ಇದ್ದ ಪ್ರಜ್ಯ ಧಾರ್ಮಿಕ ಭಾವನೆ ಉಡುಗಿ ಹೋಗಿ, ಪಾಶ್ಚಾತ್ಯ ಅನುಕರಣೆಯ ಕೇಕ್ ಕತ್ತರಿಸುವ, ಊದಿದ ಬೆಲೂನ್ ಒಡೆಯುವ ವಿಚಿತ್ರ ಪದ್ಧತಿಯಲ್ಲಿ ವಿಜೃಂಭಿಸುತ್ತಿದೆ. ಮನೆಯಲ್ಲಿನ ಈ ಹುಟ್ಟುಹಬ್ಬದ ಸಂಭ್ರಮ ಇದೀಗ ಹೊಟೇಲಿಗೆ, ಛತ್ರ, ಫಾರಂ ಹೌಸ್‌ನತ್ತ ಧಾವಿಸುತ್ತಿವೆ. ಆಡಂಬರ ಹೆಚ್ಚಿದೆ. ಇಲ್ಲಿನ ಬೆಲೂನ್‌ಗಳ ಹಾರಾಟ, ಮಿಕ್ಕಿ ಮೌಸ್ ಬೊಂಬೆಗಳ ಒಡನಾಟ, ಹಾಡು, ನೃತ್ಯ, ಮ್ಯಾಜಿಕ್ ಷೋ ಮುಂತಾದವು ಮಕ್ಕಳಿಗಳಿಗಲ್ಲದೆ ಹಿರಿಯರನ್ನೂ ಆಕರ್ಷಿಸುತ್ತಿವೆ.

ಇಲ್ಲಿ ಆತ್ಮೀಯತೆ, ಪ್ರೇಮ, ವಿಶ್ವಾಸ ಆಶೀರ್ವಾದ ವಿನಿಮಯಕ್ಕಿಂತ ವೈಭವದ ಮೆರೆತ, ಅಬ್ಬರದ ಹಾಡುಗಾರಿಕೆ, ಭಾರಿ ಉಡುಗೊರೆಯ ವಿನಿಮಯ; ಧಾರ್ಮಿಕತೆಯನ್ನು ಮಟ್ಟನಿಂತು ವೈಭವವನ್ನು ಮೆರೆಸುತ್ತಿದೆ. ನಗರೀಕರಣ ಜಾಗತೀಕರಣ, ವ್ಯಾಪಾರೀಕರಣ, ಔದ್ಯೋಗೀಕರಣ, ವೈಭವೀಕರಣದ ಮೊರೆ ಹೋಗುತ್ತಿದೆ. ಮದರ್ಸ್ ಡೇ, ಫಾದರ್ಸ್ ಡೇ, ವ್ಯಾಲೆಂಟೈನ್ ಡೇ ಎಂಬ ಹೊಸ ಹೊಸ ದಿನಾಚರಣೆಗಳು ಪಾಶ್ಚಾತ್ಯೀಕರಣದ ಅನುಕರಣೆಗೊಳಗಾಗಿವೆ ಧಾರ್ಮಿಕ ಶ್ರದ್ಧೆ, ನಂಬಿಕೆ ಅಳಿದು ಅಬ್ಬರದ ಆಡಂಬರದ ಮೆರೆತಗಳಾಗುತ್ತಿವೆ. ಈ ಬದಲಾವಣೆ ಅಪ್ರಿಯವೆನಿಸಿದರೂ ತ್ಯಾಗನೀಯವೆನಿಸದೆ. ಸಹನೀಯವಾಗ ಹತ್ತಿದೆ. ಇದು ಜಾಗತೀಕರಣದ ಪ್ರಭಾವ ಎನ್ನಲೇಬೇಕಾಗಿದೆ.


ಈ ಹುಟ್ಟುಹಬ್ಬ ಆಚರಣೆ ಕುಟುಂಬಕ್ಕೆ ಸೀಮಿತವಾಗಿದ್ದುದನ್ನು 'ವಸುದೈವ ಕುಟುಂಬ' ವ್ಯಾಪ್ತಿಯಲ್ಲಿ ಒಂದು ನಾಡನ್ನು ಪರಿಗಣಿಸಿದಾಗ ನಾಡಿನ ಗಣ್ಯ ಮಕ್ಕಳಾದ ಖ್ಯಾತ ಸಾಹಿತಿಗಳ, ಮುತ್ಸದ್ದಿಗಳ, ರಾಷ್ಟ್ರಪ್ರೇಮಿಗಳ, ಕಲಾವಿದರ, ಕ್ರೀಡಾಪಟುಗಳ, ತ್ಯಾಗಿಗಳ ಮುಂತಾದವರುಗಳ ಹುಟ್ಟುಹಬ್ಬ ಆಚರಣೆ ನಾಡಿಗೆ ಸೇರಿದುದಾಗುತ್ತದೆ. ರಾಜ್ಯ-ನಾಡ ಮಟ್ಟದಲ್ಲಿ ಇದನ್ನು ಆಚರಿಸಿದಾಗಲೇ ನಾವು ನಮ್ಮ ಕರ್ತವ್ಯವನ್ನು ನೆರವೇರಿಸಿದಂತಾಗುತ್ತದೆ. ನಮ್ಮ ಮೆಚ್ಚುಗೆ/ಕೃತಜ್ಞತೆಯನ್ನು ಈ ಪಾತ್ರಃಸ್ಮರಣೀಯವರಿಗೆ ಸಲ್ಲಿಸಿದಂತಾಗುತ್ತದೆ. ಸಾಹಿತ್ಯಿಕ, ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ನಿರತರಾಗಿರುವ ನಾವು ೧೯೦೮-೨೦೦೮ ದಶಕದ ಪಾತ್ರಃಸ್ಮರಣೀಯ ಸಾಹಿತಿಗಳಿಗೆ ಶತಮಾನೋತ್ಸವ ಆಚರಿಸಿ ಗೌರವ ನಮನಗಳನ್ನು ಸಲ್ಲಿಸಿ ಆಗಿದೆ.

೨೦೦೯ರ ಶತಮಾನೋತ್ಸವ ಆಚರಣೆಗೆ ನಾವು ಸಿದ್ಧರಾಗಬೇಕಾಗಿದೆ. ಈ ಅವಧಿಯ ವ್ಯಾಪ್ತಿಗೆ ಬರುವ ಮುಖ್ಯ ಸಾಹಿತಿಗಳೆಂದರೆ; ಡಾ.ವಿ.ಕೃ. ಗೋಕಾಕ್ (೯/೮/೧೯೦೯-೨೮/೪/೧೯೯೨); ದಿನಕರದೇಸಾಯಿ (೧೦/೯/೧೯೦೯- ೭/೧೧/೨೦೦೨); ಗರ್ಗೇಶ್ವರಿವೆಂಕಟ ಸುಬ್ಬಯ್ಯ (೧೮/೯/೧೯೦೯-೨೦/೧೨/೨೦೦೪) ಮುಂತಾದವರು. ನಮ್ಮ ಪ್ರತಿಷ್ಠಾನದ ಸ್ಥಾಪಕರಾದ ಪ್ರೊ.ಎಂ.ವಿ.ಸೀತಾರಾಮಯ್ಯ ಅವರ ಜನ್ಮದಿನ ೦೯/೯/೧೯೧೦ರಂದು ಬರುವುದರಿಂದ ಅವರ ಜನ್ಮ ಶತಮಾನೋತ್ಸವ ವರ್ಷವನ್ನಾಗಿ ೯/೯/೨೦೦೯ರಿಂದ ೮/೯/೨೦೧೦ರ ವರೆಗೆ ವಿವಿಧ ಕಾರ್ಯಕ್ರಮಗಳನ್ನು ರೂಪಿಸಿ ಅವರು ಶ್ರಮಿಸಿದ ಸಂಶೋಧನೆ, ಗ್ರಂಥ ಸಂಪಾದನೆ, ಕಾವ್ಯ, ಕಾದಂಬರಿ, ಪ್ರಬಂಧ, ವಿಮರ್ಶೆ ಕ್ಷೇತ್ರಗಳಲ್ಲಿನ ಅಮೂಲ್ಯ ಕೊಡುಗೆಗಳ ಪರಿಮಳವನ್ನು ರಾಜ್ಯಾದ್ಯಂತ ಪಸರಿಸುವ ಕೆಲಸವನ್ನು ಪ್ರತಿಷ್ಠಾನ ಹೊಮ್ಮಿಕೊಂಡಿದೆ. ಈ ಮಹತ್ ಕಾರ್ಯವನ್ನು ಅರ್ಥವತ್ತಾಗಿ ನಿರ್ವಹಿಸಲು ಸಾಹಿತ್ಯಾಭಿಮಾನಿಗಳು ಅಮೂಲ್ಯ ಸಲಹೆ ಸೂಚನೆಗಳನ್ನು ನೀಡಿ ಉಪಕರಿಸಬೇಕಾಗಿ ಈ ಮೂಲಕ ವಿನಂತಿಸಿಕೊಳ್ಳುತ್ತಿದ್ದೇವೆ.

ಎಸ್.ವಿ. ಶ್ರೀನಿವಾಸರಾವ್
ಸಂಪಾದಕರು


ಪ್ರಾತಃಸ್ಮರಣೀಯರ ಬಗ್ಗೆ ಮೇ–ಜೂನ್ ೨೦೦೮ರ ಸಂಚಿಕೆಯಲ್ಲಿ ಪೂರ್ಣ ವಿವರಗಳನ್ನು ನೀಡಲಾಗಿದೆ.

ನಾಡಿಗೇರ್ ಕೃಷ್ಣರಾವ್ : (ಜೀವಿತಕಾಲ : ೨೫/೮/೧೯೦೮–೧೯೯೨) ದತ್ತಾತ್ರೇಯ ಮತ್ತು ಕಾಮಾಕ್ಷಮ್ಮನವರ ಸುಪುತ್ರರಾಗಿ ಹರಿಹರದಲ್ಲಿ ಜನಿಸಿದ ಇವರು ಹೆಚ್ಚಿಗೆ ಓದದೆ ಇದ್ದರೂ ಕನ್ನಡದ ಹಾಸ್ಯ / ವಿಡಂಬನ ಕ್ಷೇತದಲ್ಲಿ ತಮ್ಮ ಅಪೂರ್ವ ಹಾಗೂ ಅಗಣಿತ ಕೃತಿಗಳಿಂದ ಅಮರವಾಗುಳಿದಿದ್ದಾರೆ. ಸಾಹಿತ್ಯ ಕೃಷಿಯಲ್ಲದೆ ಪತ್ರಿಕಾ ರಂಗದಲ್ಲಿ ಲೋಕಮತ, ಸಂಯುಕ್ತ ಕರ್ನಾಟಕ, ಕಥಾಂಜಲಿ, ಪ್ರಜಾಮತ, ದೇಶಬಂಧು ಮುಂತಾದ ಪತ್ರಿಕೆಗಳಲ್ಲಿ ದುಡಿದಿದ್ದಾರೆ. ಕಥೆ, ಕಾದಂಬರಿ, ಜೀವನಚಿತ್ರ ಕ್ಷೇತ್ರಗಳಿಗೂ ಸಮೃದ್ಧ ಕೊಡುಗೆಗಳನ್ನು ನೀಡಿರುತ್ತಾರೆ. ಮುಖ್ಯ ಕೃತಿಗಳು ಮೆಲ್ಲೋಗರ, ನೈಲಾನ್ ಹುಡುಗಿ ತುಳಸಮ್ಮನ ಸಂಸಾರ, ನಾಡಿಗೇರರ ನಗೆಮಿಂಚುಗಳು, ನಾಡಿಗೇರರ ಬರಹಗಳು, ತಲೆಹರಟೆ, ಹರಕುಮುರುಕು, ಮೈಕಾಸುರನ ಹಾವಳಿ, ಬೆಂಕಿಯ ಹೂವು, ಕಮಲೆಯ ಕನಸು, ಶ್ರೀಹರಿಹರ ಕ್ಷೇತ್ರ, ಪುಡಾರಿ ಪುಟ್ಟಯ್ಯ– ಮುಂತಾಗಿ ಸುಮಾರು ೭೦ ಕೃತಿಗಳನ್ನು ರಚಿಸಿದ್ದಾರೆ.



ಡಾ. ಎಸ್. ಕೆ. ಕರೀಂ ಖಾನ್: (ಜೀವಿತಕಾಲ : ೧೨/೪/೧೯೦೮–೨೯/೭/ ೨೦೦೬.) ಇವರು ಸೃಜನಾತ್ಮಕ ಕವಿಯಾಗಿ ಜಾನಪದ ಸಾಹಿತಿಯಾಗಿದ್ದುದಲ್ಲದೆ, ಚಲನಚಿತ್ರ ಸಾಹಿತಿಯಾಗಿಯೂ ಕೀರ್ತಿ ಗಳಿಸಿದ್ದರು. ಇವರ ತಂದೆ ಸಕಲೇಶಪುರದ ಅಬ್ದುಲ್ ರೆಹಮಾನ್ ಖಾನ್, ತಾಯಿ ಜೈನಾಬಿ. ಶಾಲೆಗೆ ಹೋಗಿ ಹೆಚ್ಚಿಗೆ ಓದದಿದ್ದರೂ ನಾರಾಯಣಶಾಸ್ತ್ರಿಗಳ ಬಳಿ ಕನ್ನಡ–ಸಂಸ್ಕೃತ ಅಧ್ಯಯನ ಮಾಡಿ ವಿದ್ವತ್ ಗಳಿಸಿಕೊಂಡರು. ಜಾನಪದದಲ್ಲಿ ಅತೀವ ಆಸಕ್ತಿಯಿದ್ದುದರಿಂದ ಹಳ್ಳಿ ಹಳ್ಳಿ ತಿರುಗಿ ಜಾನಪದ ಗೀತೆಗಳನ್ನು ಸಂಗ್ರಹಿಸಿದರು. ಮಧುರ ಕಂಠಸಿರಿ ಇದ್ದುದರಿಂದ ಹಾಡಿ ಜನರನ್ನು ರಂಜಿಸಿದರು. 'ಅಂತರಂಗ' 'ಲೋಕಮಿತ್ರ' ಪತ್ರಿಕೆಗಳಲ್ಲೂ ಕೆಲಕಾಲ ದುಡಿದು ಪತ್ರಿಕಾ ರಂಗದ ಅನುಭವ ಪಡೆದರು. ನೂರಾರು ಸಿನಿಮಾ ಗೀತೆಗಳನ್ನು ರಚಿಸಿದ್ದಾರೆ, ಸಂಭಾಷಣೆ ಬರೆದಿದ್ದಾರೆ. ಇವರ 'ಜಾನಪದಗೀತೆ' (ಸಂಗ್ರಹ) ಪ್ರಮುಖ ಕೃತಿ. ಕೆಲ ಕಾಲ ಜನಪದ ಅಕಾಡೆಮಿಯ ಅಧ್ಯಕ್ಷರೂ ಆಗಿದ್ದರು. ಗುಲ್ಬರ್ಗಾ ವಿಶ್ವವಿದ್ಯಾಲಯದ ಡಾಕ್ಟರೇಟ್, ಪ್ರತಿಷ್ಠಿತ 'ಜಾನಪದಶ್ರೀ' ಪ್ರಶಸ್ತಿಗೆ ಭಾಜನರಾಗಿದ್ದಾರೆ. ಬಹುಮುಖ ಪ್ರತಿಭೆಯಿಂದಾಗಿ ಸಾಹಿತ್ಯ ಕ್ಷೇತ್ರದಲ್ಲಿ ಅಮರವಾಗುಳಿದಿದ್ದಾರೆ.

ಚಿ. ಸದಾಶಿವಯ್ಯ : (ಜೀವಿತಕಾಲ : ೮/೪/೧೯೦೮–೧೪/೧/೧೯೮೨.) ತುಮಕೂರು ಜಿಲ್ಲೆ ಚಿಟ್ಟನಹಳ್ಳಿ (ಈಗಿನ ಚಂದ್ರಶೇಖರ ಪುರ). ಶ್ರೀಕಂಠಯ್ಯ ತಂದೆ. ತಾಯಿ ನಂಜಮ್ಮ. ಕಾವ್ಯನಾಮ : 'ಚಿರಂಜೀವಿ' ಮಕ್ಕಳ ಸಾಹಿತ್ಯ ರಚನಾಕಾರರಾಗಿ ಸಾಹಿತ್ಯ ಕ್ಷೇತ್ರ ಪ್ರವೇಶಿಸಿದ ಶ್ರೀಯುತರು ಖ್ಯಾತಿ ಸಂಪಾದಿಸಿದ್ದು, ಸಿನಿಮಾ ಸಾಹಿತಿಯಾಗಿ, ನಾಟಕ ಕ್ಷೇತ್ರದಲ್ಲೂ ಇವರ ಕೊಡುಗೆ ಅಪಾರ. ೨೦ಕ್ಕೂ ಹೆಚ್ಚು ನಾಟಕಗಳನ್ನು ರಚಿಸಿದ್ದಾರೆ. ಹಲವಾರು ಚಿತ್ರಗಳನ್ನು ನಿರ್ದೇಶಿಸಿಯೂ ಇದ್ದಾರೆ. ಇವರ ಮುಖ್ಯ ಕೃತಿಗಳು ಅಮ್ಮ, ಶಿವಾಜಿಯ ಬಾಲ್ಯ, ಮಕ್ಕಳೇ ದೇವರು (ಮಕ್ಕಳ ನಾಟಕಗಳು) : ಬೃಂದಾವನ (ಸಂಗೀತ ನಾಟಕ) ಲೀಲಾ ಗಂಡ (ಸಣ್ಣ ಕಥೆಗಳ ಸಂಕಲನ), ಮೈಸೂರು ಹುಲಿ (ಐತಿಹಾಸಿಕ ಪ್ರಬಂಧ). ಇವರು ಸಂಪಾದಿಸುತ್ತಿದ್ದ ಪತ್ರಿಕೆ 'ವಿಜಯಚಿತ್ರ'



ರಾಜಾರಾವ್ : (ಜೀವಿತಕಾಲ: ೮/೧೧/೧೯೦೮– ೮/೭/೨೦೦೬.) ಇಂಗ್ಲೀಷಿನಲ್ಲಿ ಕೃತಿಗಳನ್ನು ರಚಿಸಿದ್ದಾರೆ. 'ಕಾಂತಾಪುರ' ಹೆಸರಾಂತ ಕೃತಿ.

೨೦೦೮ರ ಶತಮಾನದ ಎಲ್ಲಾ ಖ್ಯಾತ ಪ್ರಾತಃ ಸ್ಮರಣೀಯರಿಗೂ ನಮ್ಮ ಗೌರವಪೂರ್ವಕ ನಮನಗಳು.

❐

ನಾಡೋಜ ಪ್ರಶಸ್ತಿ : (೨೦೦೮) ಕನ್ನಡ ವಿಶ್ವವಿದ್ಯಾನಿಲಯ ಹಂಪಿ, ೨೦೦೮ನೇ ಸಾಲಿಗೆ ಡಾ. ಎಲ್. ಬಸವರಾಜು, ಡಾ. ಯು.ಆರ್. ಅನಂತಮೂರ್ತಿ, ತೊಗಲು ಬೊಂಬೆ ಕಲಾವಿದ ಯಡ್ರಾಮನಹಳ್ಳಿ ದೊಡ್ಡ ಭರಮಪ್ಪ, ಪ್ರೊ. ಕಮಲಾ ಹಂಪನಾ, ಡಾ. ಶ್ರೀನಿವಾಸ ಹಾವನೂರ ಅವರಿಗೆ ಪ್ರಶಸ್ತಿ ನೀಡಿ ಗೌರವಿಸಿದೆ.

ವಿನಂತಿ

ಹಲವು ಸಾಹಿತ್ಯಾಭಿಮಾನಿಗಳು ನಮ್ಮ ಪ್ರತಿಷ್ಠಾನದಲ್ಲಿ ಅವರ ಸಂಬಂಧಿಕರ, ಅಭಿಮಾನಿಗಳ ಗೌರವಾರ್ಥ ಅವರುಗಳ ಹೆಸರಿನಲ್ಲಿ ಸಾಹಿತ್ಯಿಕ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರುವ ಉದ್ದೇಶದಿಂದ 'ದತ್ತಿ'ಯನ್ನು ಇರಿಸಿರುತ್ತಾರೆ. ದಿನೇ ದಿನೇ ಬ್ಯಾಂಕಿನ ಬಡ್ಡಿದರ ಇಳಿಮುಖವಾಗುತ್ತಿದ್ದು, ಕಾರ್ಯಕ್ರಮ ನಡೆಸುವ ಖರ್ಚು ಏರುತ್ತಿರುವುದರಿಂದ ಸನ್ಮಾನ್ಯ ದಾನಿಗಳು ತಾವು ಇರಿಸಿರುವ ದತ್ತಿ ಮೊಬಲಗನ್ನು ಕೊನೆಯಪಕ್ಷ ರೂ. ೨೫,೦೦೦/–ಕ್ಕೆ ಏರಿಸಲು ಶೀಘ್ರವೇ ಕ್ರಮತೆಗೆದುಕೊಳ್ಳಬೇಕೆಂದು ವಿನಂತಿಸಿಕೊಳ್ಳುತ್ತಿದ್ದೇವೆ. ಹೀಗಾದಲ್ಲಿ ಮಾತ್ರ ದತ್ತಿದಾನಿಗಳ ಹೆಸರಿನಲ್ಲಿ ಒಂದು ದಿನದ ಕಾರ್ಯಕ್ರಮ ಆಯೋಜಿಸಲು ಸಾಧ್ಯವಾಗುತ್ತದೆ ಎಂದು ಸಹೃದಯರಲ್ಲಿ ಸವಿನಯದಿಂದ ವಿನಂತಿಸಿಕೊಳ್ಳುತ್ತಿದ್ದೇವೆ.

ಗೌರವ ಕಾರ್ಯದರ್ಶಿ

ಪ್ರತಿಷ್ಠಾನದ ವಾರ್ತೆ

ಕಾರ್ಯಕ್ರಮಗಳು

೮/೧೦/೨೦೦೮ ಸಂಜೆ ೬.೩೦ ಹಳಗನ್ನಡ ಕಾವ್ಯಾಭ್ಯಾಸ ಶಿಬಿರ, ಪ್ರಾಚೀನ ಹಸ್ತಪ್ರತಿ ಪ್ರದರ್ಶನ ಹಾಗೂ ಸಿರಿಸಂಗೀತ

ಬಿ.ಎಂ.ಶ್ರೀ. ಪ್ರತಿಷ್ಠಾನದಲ್ಲಿ ಅಕ್ಟೋಬರ್ ೮, ೯, ೧೦ರಂದು ಪ್ರಾಚೀನ ಹಸ್ತಪ್ರತಿ ಪ್ರದರ್ಶನ ಏರ್ಪಡಿಸಲಾಗಿತ್ತು. ಅಕ್ಟೋಬರ್ ೮ರಂದು ಸಂಜೆ ೬-೩೦ಕ್ಕೆ ಈ ಪ್ರದರ್ಶನದ ಉದ್ಘಾಟನೆಯನ್ನು ಪ್ರತಿಷ್ಠಾನದ ಗೌರವಾಧ್ಯಕ್ಷ ನಾಡೋಜ ಡಾ. ಜಿ. ನಾರಾಯಣ ನೆರವೇರಿಸಿದರು. ಹಳಗನ್ನಡ ಕಾವ್ಯಾಭ್ಯಾಸ ಶಿಬಿರದ ನಿರ್ದೇಶಕರಾದ ಡಾ. ಕೆ.ಆರ್. ಗಣೇಶ್ ಶಿಬಿರದ ಉದ್ಘಾಟನೆ ಮಾಡಿ ಶಿಬಿರದ ವೈಶಿಷ್ಟ್ಯವನ್ನು ವಿದ್ಯಾರ್ಥಿಗಳಿಗೆ ವಿವರಿಸಿದರು. ಪ್ರತಿಷ್ಠಾನದ ಅಧ್ಯಕ್ಷರಾದ ಡಾ.ಪಿ.ವಿ ನಾರಾಯಣ ಅಧ್ಯಕ್ಷತೆ ವಹಿಸಿದ್ದರು. ಪ್ರಾರಂಭದಲ್ಲಿ ಹಿರಿಯ ವಿದ್ವಾಂಸ ಡಾ. ಸುಬ್ರಹ್ಮಣ್ಯ ಹಳಗನ್ನಡ ಸಾಹಿತ್ಯದ ವೈಶಿಷ್ಟ್ಯ ಹಾಗೂ ಅದನ್ನು ಅರಿಯುವ ಅಗತ್ಯವನ್ನು ಉದಾಹರಣೆ ಸಹಿತ ಬಣ್ಣಿಸಿದರು. ಶ್ರೀಮತಿ ಅಂಬುಜಾ ಪ್ರಕಾಶ್ ಮತ್ತು ತಂಡದವರು ಸಿರಿಸಂಗೀತ ಕಾರ್ಯಕ್ರಮ ನೆರವೇರಿಸಿದರು. ತಬಲದಲ್ಲಿ ಶ್ರೀ ಆರ್. ನಾಗರಾಜು, ಪಿಟೀಲು ಶ್ರೀ ಪಿ.ಎಸ್. ರಾಘವೇಂದ್ರ ಸಹಯೋಗ ನೀಡಿದರು. ಡಾ.ನಾ. ಗೀತಾಚಾರ್ಯ ಪ್ರಾರಂಭದಲ್ಲಿ ಸರ್ವರನ್ನೂ ಸ್ವಾಗತಿಸಿದರು. ಕೊನೆಯಲ್ಲಿ ಶ್ರೀ ಎಸ್.ವಿ. ಶ್ರೀನಿವಾಸರಾವ್ ವಂದನಾರ್ಪಣೆ ಮಾಡಿದರು.

ದಿನಾಂಕ ೨೬/೧೦/೦೮ ಭಾನುವಾರ ಚಿತ್ರದುರ್ಗದ ಸಾಹಿತ್ಯಿಕ-ಸಾಂಸ್ಕೃತಿಕ ವೇದಿಕೆ, 'ಅಭಿರುಚಿ' ಮತ್ತು ಬೆಂಗಳೂರಿನ ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ ಜಂಟಿಯಾಗಿ ಟಿ.ಎಸ್. ವೆಂಕಣಯ್ಯ ದತ್ತಿ ಕಾರ್ಯಕ್ರಮ ಮತ್ತು ಅ.ನ.ಕೃ ಶತಮಾನೋತ್ಸವ ಸಮಾರಂಭವನ್ನು ಚಿತ್ರದುರ್ಗದಲ್ಲಿರುವ ಐ.ಎಂ.ಎ ಹಾಲ್, ಮದಕರಿ ವೃತ್ತದಲ್ಲಿ ಆಯೋಜಿಸಲಾಗಿತ್ತು. ಪ್ರತಿಷ್ಠಾನದ ಅಧ್ಯಕ್ಷರಾದ ಡಾ.ಪಿ.ವಿ. ನಾರಾಯಣ ಅಧ್ಯಕ್ಷತೆ ವಹಿಸಿದ್ದರು.

ಅಶ್ವಿನಿ ದೇವತೆಗಳೊಬ್ಬರೆಂದು ಖ್ಯಾತರಾಗಿದ್ದ ಟಿ.ಎಸ್.ವೆಂಕಣ್ಣಯ್ಯರವರ ಜೀವನ, ಸಾಧನೆಗಳನ್ನು ಡಾ. ಪಿ.ವಿ.ನಾರಾಯಣ ಅವರು ವಿಶದವಾಗಿ ವಿವರಿಸಿದರು. ಶ್ರೀ ಎಸ್.ವಿ. ಶ್ರೀನಿವಾಸರಾಯರು ಅ.ನ.ಕೃ ಬಗ್ಗೆ ಮಾತನಾಡುತ್ತ ಅವರು 'ಕನ್ನಡ ನುಡಿ'ಯ ಸಂಪಾದಕರಾಗಿದ್ದರು. ಖ್ಯಾತ ಕಾದಂಬರಿಕಾರರಾಗಿದ್ದರು. ನಾನೂ ಇವೆರಡೂ ಪ್ರಕಾರಗಳಲ್ಲಿ ಕಿಂಚಿತ್ ಸೇವೆಯನ್ನು ಸಲಿಸಿದ್ದೇನೆಂಬ ಹೆಮ್ಮೆ ಇದೆ ಎಂದು ಪ್ರಾರಂಭಿಸಿ. ಅನಕೃ ಬದುಕು ಬರಹದ ಬಗ್ಗೆ ಬೆಳಕು ಚೆಲ್ಲಿದರು. ಅಧ್ಯಕ್ಷತೆ ವಹಿಸಿದ್ದ ಪ್ರೊ.ಬಿ.ಪಿ. ವೀರೇಂದ್ರಕುಮಾರ್ ಅಧ್ಯಕ್ಷ ಭಾಷಣ ಮಾಡಿದರು. ಈ ಕಾರ್ಯಕ್ರಮದಲ್ಲಿ ಬಿ.ಎಂ.ಶ್ರೀ ಪ್ರತಿಷ್ಠಾನದ ಹಾಗೂ ಡಾ. ಪಿ.ವಿ ನಾರಾಯಣ ಅವರ ಗ್ರಂಥಗಳನ್ನು ಪ್ರದರ್ಶಿಸಲಾಗಿತ್ತು. ಒಂದು ಸಾವಿರಕ್ಕೂ ಹೆಚ್ಚು ಮೌಲ್ಯದ ಪುಸ್ತಕಗಳು ಮಾರಾಟವಾದದ್ದು ವಿಶೇಷ. ಶ್ರೀ ಧೀರೇಂದ್ರಕುಮಾರ್ ಪುಸ್ತಕ ಪ್ರದರ್ಶನ ಹಾಗೂ ಮಾರಾಟದ ವ್ಯವಸ್ಥೆಯನ್ನು ನಿರ್ವಹಿಸಿದ್ದರು.

೧೮/೧೧/೦೮ ಮಂಗಳವಾರ ಬೆಳಗ್ಗೆ ೧೧.೦೦. ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ ಮತ್ತು ತುಮಕೂರಿನ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು ಜಂಟಿಯಾಗಿ ಏರ್ಪಡಿಸಿದ್ದ ಆಸ್ಥಾನ ವಿದ್ವಾನ್ ಎಂ.ಜಿ. ನಂಜುಂಡಾರಾಧ್ಯ ಮತ್ತು ಬಿ.ಎನ್. ಮಹದೇವಯ್ಯ ದತ್ತಿ ಕಾರ್ಯಕ್ರಮಗಳನ್ನು ತುಮಕೂರಿನ ಸಿದ್ಧಗಂಗಾ ಬಾಲಕರ ಪಿ.ಯು. ಕಾಲೇಜಿನ ಸೆಮಿನಾರ್ ಹಾಲ್‌ನಲ್ಲಿ ನೆರವೇರಿತು. ಈ ದತ್ತಿ ಕಾರ್ಯಗಳ ಉದ್ಘಾಟನೆ ಶ್ರೀ ಎನ್. ಬಸವಾರಾಧ್ಯಯವರಿಂದ ನಡೆಯಿತು. ಜಿಲ್ಲಾ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಡಾ. ಡಿ.ಎನ್. ಯೋಗೇಶ್ ಸ್ವಾಗತಿಸಿದರು. ಕಾಲೇಜಿನ ಪ್ರಾಂಶುಪಾಲ ಪ್ರೊ. ಟಿ.ಕೆ ನಂಜುಡಪ್ಪ ಅಧ್ಯಕ್ಷತೆ ವಹಿಸಿದ್ದರು. ಸಂಶೋಧಕ ಡಾ. ನಂಜುಂಡಸ್ವಾಮಿ ದತ್ತಿದಾನಿ, ವಿದ್ವಾನ್ ಎಂ.ಜಿ. ನಂಜುಂಡಾರಾಧ್ಯರ ಬದುಕು-ಬರಹ ಕುರಿತು ವಿವರಣಾತ್ಮಕ ಮಾಹಿತಿ ನೀಡಿದರು. ಪ್ರೊ. ಮ.ಲ.ನ. ಮೂರ್ತಿ ಅವರು ಟಿ.ಎನ್. ಮಹದೇವಯ್ಯನವರ ಬದುಕು-ಬರಹ ಕುರಿತು ಮಾಹಿತಿ ನೀಡಿದರು. ಮುಖ್ಯ ಅತಿಥಿ ಮಹದೇವಯ್ಯನವರ ಮಗಳು ಶ್ರೀಮತಿ ಅಮೃತಾ ವೀರಭದ್ರಯ್ಯ ತಂದೆಯ ಬಗ್ಗೆ ಆತ್ಮೀಯವಾಗಿ ಮಾತನಾಡಿ ಅವರ ಜೀವನದಲ್ಲಿನ ಸವಿನೆನಪುಗಳನ್ನು ಹಂಚಿಕೊಂಡರು. ಪ್ರತಿಷ್ಠಾನದ ವ್ಯವಸ್ಥಾಪಕ ಕಾರ್ಯದರ್ಶಿ ಶ್ರೀ ಎಸ್.ವಿ. ಶ್ರೀನಿವಾಸರಾಯರು ಪ್ರತಿಷ್ಠಾನದ ಕಾರ್ಯ ಚಟುವಟಿಕೆಗಳ ಪರಿಚಯ ಮಾಡಿಕೊಟ್ಟು ಈ ಕಾರ್ಯಕ್ರಮವನ್ನು ತುಮಕೂರಿನಲ್ಲಿ ವ್ಯವಸ್ಥೆ ಮಾಡಿದ್ದಕ್ಕೆ ಕಾರ್ಯಕರ್ತರುಗಳಿಗೆ, ಜಿಲ್ಲಾ ಶರಣ ಸಾಹಿತ್ಯ ಪರಿಷತ್ತಿನ ಪದಾಧಿಕಾರಿಗಳಿಗೆ ವಂದನೆ ಸಲ್ಲಿಸಿದರು. ಡಾ.ನಾ. ಗೀತಾಚಾರ್ಯ ವೇದಿಕೆಯ ಮೇಲೆ ಉಪಸ್ಥಿತರಿದ್ದರು.

೨೪/೧೧/೦೮ ಸೋಮವಾರ ಸಂಜೆ ೬-೧೫ಕ್ಕೆ ಡಿ.ಎಲ್.ಎನ್ ಮತ್ತು ಟಿ.ಎಸ್. ವೆಂಕಣ್ಣಯ್ಯ ದತ್ತಿ ಕಾರ್ಯಕ್ರಮ ಹಾಗೂ ಪುಸ್ತಕಗಳ ಬಿಡುಗಡೆ ಸಮಾರಂಭ :


ಡಾ. ಟಿ.ವಿ. ವೆಂಕಟಾಚಲಶಾಸ್ತ್ರೀ ಅವರು ಸಂಪಾದಿಸಿರುವ **"ಡಿ.ಎಲ್.ಎನ್ ಅವರ ಹೆಚ್ಚಿನ ಬರಹಗಳು"** ಗ್ರಂಥವನ್ನು ಡಾ.ಎಂ. ಚಿದಾನಂದ ಮೂರ್ತಿ ಅವರು; ಶ್ರೀಮತಿ ತಾರಾಮೂರ್ತಿ ಅವರು ರಚಿಸಿರುವ **'ಕುಂತಿಯ ಅಂತರಾಳ'** ಕೃತಿಯನ್ನು ಡಾ. ವಿಜಯಾ ಸುಬ್ಬರಾಜ್ ಬಿಡುಗಡೆ ಮಾಡಿದ ಈ ಇಬ್ಬರು ವಿದ್ವಾಂಸರುಗಳು ಕೃತಿಯನ್ನು ಕುರಿತು ಮಾತನಾಡಿದರು. ಪ್ರತಿಷ್ಠಾನದ ಗೌರವಾಧ್ಯಕ್ಷ ನಾಡೋಜ ಜಿ.ನಾರಾಯಣ ಅಧ್ಯಕ್ಷತೆ ವಹಿಸಿದ್ದರು. ಬೆಳಗೆರೆ ಕೃಷ್ಣ ಶಾಸ್ತ್ರಿಗಳು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಡಾ.ನಾ. ಗೀತಾಚಾರ್ಯ ಪ್ರಾರಂಭದಲ್ಲಿ ಪ್ರಸ್ತಾವಿಕ ಭಾಷಣ ಮಾಡಿದರು. ಡಾ. ವೆಂಕಟಾಚಲಶಾಸ್ತ್ರೀಗಳು ತಾವು ಸಂಪಾದಿಸಿರುವ ಕೃತಿಯಲ್ಲಿನ ಮುಖ್ಯ ಮಾಹಿತಿಯನ್ನು ತಿಳಿಸಿದರು. ಶ್ರೀನಿವಾಸರಾವ್ ವಂದಿಸಿದರು.



೨೪/೧೧/೦೮ ಸೋಮವಾರ ಸಂಜೆ ೬-೧೫ಕ್ಕೆ ಡಿ.ಎಲ್.ಎನ್ ಮತ್ತು ಟಿಎಸ್ ವೆಂಕಣ್ಣಯ್ಯ ದತ್ತಿ ಕಾರ್ಯಕ್ರಮ ಹಾಗೂ ಪುಸ್ತಕಗಳ ಬಿಡುಗಡೆ ಸಮಾರಂಭ

ದಿನಾಂಕ ೪/೧೨/೦೮ ಗುರುವಾರ ಸಂಜೆ ೬.೦೦ ರಾಘವ ಪ್ರಕಾಶನ, ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನದ ಸಹಯೋಗದಲ್ಲಿ ಶ್ರೀ ಎಂ.ಎಸ್.ಭಾಸ್ಕರ್ ಅವರ 'ನೆನಪಿನ-ಮೆಲುಕು'(ಕವನ ಸಂಕಲನ)ದ ಲೋಕಾರ್ಪಣೆ ಕಾರ್ಯಕ್ರಮ

ಕುಮಾರಿ ನೇತ್ರಾ ಅವರ ಪ್ರಾರ್ಥನೆಯೊಡನೆ ಕಾರ್ಯಕ್ರಮ ಪ್ರಾರಂಭಗೊಂಡಿತು. ಈ ಬಸವರಾಜಪ್ಪ ಕಾರ್ಯಕ್ರಮ ನಿರೂಪಿಸಿದರು. ಶ್ರೀ ಶ್ರೀನಿವಾಸರಾವ್ ಅತಿಥಿಗಳನ್ನು ಸ್ವಾಗತಿಸಿ ಪರಿಚಯ ಮಾಡಿಕೊಟ್ಟರು ಖ್ಯಾತ ಕವಿ ಡಾ. ಸುಮತೀಂದ್ರ ನಾಡಿಗ ಅವರು ಗ್ರಂಥ ಬಿಡುಗಡೆ ಮಾಡಿ ಕೃತಿಯಲ್ಲಿನ ಮುಖ್ಯ ಅಂಶಗಳನ್ನು ಪರಿಚಯಿಸಿದರು. ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಬಸವನ ಗುಡಿ ಶಾಸಕ ಈ ಎಲ್.ಎ. ರವಿ ಸುಬ್ರಹ್ಮಣ್ಯ ಅವರು ಪ್ರತಿಷ್ಠಾನಕ್ಕೆ ಎಲ್ಲ ವಿಧದ ಸಹಾಯ ಮಾಡುವ ಆಶ್ವಾಸನೆಯನ್ನು ನೀಡಿ, ಪ್ರತಿಷ್ಠಾನದ ಕಾರ್ಯಚಟುವಟಿಕೆಗಳನ್ನು ಪ್ರಶಂಸಿದರು. ಡಾ.ನಾ. ಗೀತಾಚಾರ್ಯ ಅವರು ಗ್ರಂಥ ಕುರಿತು ಮಾತನಾಡಿ, ಪ್ರೊ. ಎಂ.ವಿ. ಸೀತಾರಾಮಯ್ಯ ಅವರ ಇಬ್ಬರೂ ಪುತ್ರರೂ ಕವಿಗಳಾಗಿ ಮಾರ್ಪಟ್ಟಿರುವುದು ಬಹು ಸಂತೋಷದ ಸಂಗತಿ ಎಂದು ಹೇಳಿದರು. ಪ್ರತಿಷ್ಠಾನದ ಗೌರವಾಧ್ಯಕ್ಷರಾದ ನಾಡೋಜ ಜಿ.ನಾರಾಯಣ ಅಧ್ಯಕ್ಷರಾದ ಡಾ. ಪಿ.ವಿ. ನಾರಾಯಣ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಶ್ರೀಮತಿ ಸುಕನ್ಯಾ ವಿಜಯಾಕುಮಾರಿ ಮತ್ತು ತಂಡದವರಿಂದ 'ಸಿರಿ ಸಂಗೀತ' ಕಾರ್ಯಕ್ರಮ ನಡೆಯಿತು. ಶ್ರೀ ಆರ್. ನಾಗರಾಜ್ ತಬಲದ ನೆರವು ನೀಡಿದರು. ಶ್ರೀ ಎಂ.ಎಸ್. ಭಾಸ್ಕರ್ ಅತಿಥಿಗಳಿಗೆ ವಂದನೆ ಸಲ್ಲಿಸಿದರು.



ಶ್ರೀ ಎಂ.ಎಸ್. ಭಾಸ್ಕರ್ ಅವರ
ನೆನಪಿನ ಮೆಲುಕು (ಕನವಸಂಕಲನ) ಬಿಡುಗಡೆ ಸಮಾರಂಭ

೧೨/೧೨/೦೮ ಶುಕ್ರವಾರ ಸಂಜೆ ೬-೦೦ ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ ೨೦೦೮-೦೯ನೇ ಸಾಲಿನ ಎಂ.ಫಿಲ್ ತರಗತಿಗಳ ಉದ್ಘಾಟನಾ ಸಮಾರಂಭ ಏರ್ಪಡಿಸಿತ್ತು


ತರಗತಿಗಳ ಉದ್ಘಾಟನೆಯನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿರುವ ಪ್ರೊ. ಎಂ.ಎಚ್. ಕೃಷ್ಣಯ್ಯ ನಡೆಸಿದರು. ಮುಖ್ಯ ಅತಿಥಿಗಳಾಗಿ ಸಂಸ್ಕೃತ ವಿಶ್ವವಿದ್ಯಾಲಯದ ವಿಶೇಷಾಧಿಕಾರಿ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್ ಇವರು ಮಾತನಾಡಿ ಎಂ ಫಿಲ್ ವಿದ್ಯಾಥಿಗಳಿಗೆ ಉಪಯುಕ್ತ ಕೆಲವು ಕಿವಿಮಾತು ಹೇಳಿದರು.

ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿ ನಿಯುಕ್ತಗೊಂಡಿರುವ ಪ್ರೊ.ಎಂ.ಎಚ್. ಕೃಷ್ಣಯ್ಯ ಅವರನ್ನು ಪ್ರತಿಷ್ಠಾನದ ವತಿಯಿಂದ ಗೌರವಾಧ್ಯಕ್ಷ ಡಾ. ಜಿ.ನಾರಾಯಣ, ಅಧ್ಯಕ್ಷ ಪಿ.ವಿ. ನಾರಾಯಣ, ಕಾರ್ಯದರ್ಶಿಗಳಾದ ಶ್ರೀ ಶ್ರೀನಿವಾಸರಾವ್ ಮತ್ತು ಡಾ. ನಾ. ಗೀತಾಚಾರ್ಯ ಶಾಲು ಹೊದಿಸಿ ಸನ್ಮಾನಿಸಿದರು, ಹಾಗೂ ಅಭಿನಂದಿಸಿ ಅವರಿಂದ ಉತ್ತಮ ಕಾರ್ಯ ಚಟುವಟಿಕೆಗಳು ಯಶಸ್ವಿಯಾಗಿ ನಡೆಯಲಿ ಎಂದು ಆಶಿಸಿದರು. ನಾಡೋಜ. ಜಿ. ನಾರಾಯಣ ಅಧ್ಯಕ್ಷತೆ ವಹಿಸಿದ್ದರು. ಪ್ರಾರಂಭದಲ್ಲಿ ಎಂಫಿಲ್ ತರಗತಿಗಳ ನಿರ್ದೇಶಕರಾದ ಡಾ. ನಾ.ಗೀತಾಚಾರ್ಯ ಪ್ರಸ್ತಾವಿಕ ಭಾಷಣ ಮಾಡಿ ವಿದ್ಯಾರ್ಥಿಗಳಿಗೆ ಉಪಯುಕ್ತ ಮಾಹಿತಿ ನೀಡಿದರು. ಕೊನೆಯಲ್ಲಿ ಎಂಫಿಲ್ ವಿದ್ಯಾರ್ಥಿ ವಂದನಾರ್ಪಣೆ ಸಲ್ಲಿಸಿದರು.



ಎಂಫಿಲ್ ತರಗತಿಗಳ ಉದ್ಘಾಟನೆ ಮತ್ತು ಪ್ರೊ. ಎಂ.ಎಚ್.ಕೃಷ್ಣಯ್ಯ ಅವರಿಗೆ ಅಭಿನಂದನಾ ಸಮಾರಂಭ

೨೮/೧೧/೨೦೦೮ ಮೇಷ್ಟ್ರ ದಿನ
ಚಿ. ಶ್ರೀನಿವಾಸರಾಜು ಸಂಸ್ಮರಣೆ



ಸಂಚಯ ಸಾಹಿತ್ಯ-ಸಾಂಸ್ಕೃತಿಕ ಪತ್ರಿಕೆ ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನದ ಸಹಯೋಗ ದೊಡನೆ ಈ ಕಾರ್ಯಕ್ರಮ ಏರ್ಪಡಿಸಿತ್ತು. ನಮ್ಮ ಮೇಸ್ಟ್ರಿಗೆ ವಿವಿಧ ಕವಿಗಳ ಕವಿತಾಗುಚ್ಛವನ್ನು ಶ್ರೀ ಎಸ್. ಮಂಜುನಾಥ ಅವರು ಅರ್ಪಿಸಿದರು. 'ಕವಿ ಸಮಯ' ಕವಿಗೋಷ್ಠಿಯಲ್ಲಿ ಜಿ.ಎನ್. ಮೋಹನ್, ರಾಮಲಿಂಗಪ್ಪ ಟಿ. ಜಯಪ್ರಕಾಶ ನಾರಾಯಣ, ಜಿ. ಬಿ. ಹರೀಶ್, ರಾಜ್‌ಲಕ್ಷ್ಮಿಕೋಡಿ ಬೆಟ್ಟು, ಆರ್.ಸುಧೀಂದ್ರ ಕುಮಾರ್; ಎಲ್.ಜಿ.ಮೀರಾ; ಶಶಿ ಸಂಪಳ್ಳಿ, ಹೇಮ ಎಸ್; ಚ.ಹ.ರಘುನಾಥ್ ಎಲ್.ಎನ್. ಮುಕುಂದರಾಜ್ ರವರು ಕವಿತೆಗಳನ್ನು ಓದಿದರು.

೩೦/೨/೨೦೦೮ ಮಂಗಳವಾರ ಸಂಜೆ ೫-೩೦: ಡಾ. ಆ.ನೆ. ಉಪಾಧ್ಯೆ; ಡಾ. ಎಂ.ಎ. ಜಯಚಂದ್ರ; ಶ್ರೀಮತಿ ಎಂ.ಕೆ.ವಿಜಯಲಕ್ಷ್ಮಿ ದತ್ತಿ ಕಾರ್ಯಕ್ರಮಗಳ ಅಂಗವಾಗಿ ಡಾ.ಜಿ.ಪಿ.ರಾಜರತ್ನಂ ಶತಮಾನೋತ್ಸವ ಸಮಾರಂಭ ನಡೆಸಲಾಯಿತು. ಪ್ರತಿಷ್ಠಾನದ ಗೌರವಾಧ್ಯಕ್ಷರಾಧ ನಾಡೋಜ ಜಿ.ನಾರಾಯಣ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಶ್ರೀ ನೀಲತ್ತಳ್ಳಿ ಕಸ್ತೂರಿ ಅವರು ಡಾ. ಜಿ.ಪಿ. ರಾಜರತ್ನಂರವರ ಬದುಕು-ಬರಹ ಕುರಿತು ಮಾಹಿತಿ ನೀಡಿದರು. ಪ್ರೊ. ಜಿ.ಅಶ್ವತ್ಥ ನಾರಾಯಣ ಅವರು ರಾಜರತ್ನಂ ಬರೆದಿರುವ ಜೈನ ಸಾಹಿತ್ಯದ ಮೇಲೆ ವಿಸ್ತೃತ ಬೆಳಕು ಚೆಲ್ಲಿದುದಲ್ಲದೆ ಅವರ ಜೊತೆಯಲ್ಲಿನ ಆತ್ಮೀಯ ಸನ್ನಿವೇಶ ಗಳನ್ನು ನೆನಪಿಸಿಕೊಂಡರು. ಪ್ರತಿಷ್ಠಾನದ ಅಧ್ಯಕ್ಷರಾದ ಡಾ॥ ಪಿ.ವಿ. ನಾರಾಯಣ ಸ್ವಾಗತಿಸಿದರು. ಶ್ರೀ ಮಂಜುನಾಥ್ ಕಾರ್ಯಕ್ರಮ


ನಿರೂಪಿಸಿದರು. ದತ್ತಿ ದಾನಿಗಳಾದ ಡಾ. ಎಂ.ಎ.ಜಯಚಂದ್ರ ಮತ್ತು ಶ್ರೀ ರವಿಕಿರಣ್ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಶ್ರೀ ರವಿಕಿರಣ್ ಅವರು ಶ್ರೀಮತಿ ಎಂ.ಕೆ.ವಿಜಯಲಕ್ಷ್ಮಿ ದತ್ತಿ ನಿಧಿಗೆ ಮತ್ತೆ ೧೨ ಸಾವಿರ ರೂಪಾಯಿಗಳನ್ನು ಸೇರಿಸಿದರು ಹಾಗೂ ಅಂದು ನಡೆದ ಕಾರ್ಯಕ್ರಮದ ಖರ್ಚಿಗಾಗಿ ಒಂದು ಸಾವಿರ ರೂಪಾಯಿಗಳನ್ನು ನೀಡಿದರು. ವ್ಯವಸ್ಥಾಪಕ ಕಾರ್ಯದರ್ಶಿ, ಅತಿಥಿಗಳು ಹಾಗೂ ಸಭಿಕರಿಗೆ ವಂದಿಸಿ, ದತ್ತಿ ದಾನಿಗಳಿಗೆ ಕೃತಜ್ಞತೆ ಅರ್ಪಿಸಿದರು.

❐

ಪತ್ರಿಕಾವರದಿ

ಹಳಗನ್ನಡ ಕಾವ್ಯವಾಚನ ಶಿಬಿರ ಉದ್ಘಾಟನೆ

ಬೆಂಗಳೂರು, ಅ.೧೫–ಹಳಗನ್ನಡ ಕಾವ್ಯಗಳ ಓದುವ ಪ್ರವೃತ್ತಿ ಇತ್ತೀಚೆಗೆ ಕಡಿಮೆ ಆಗಿದ್ದು ಇದಕ್ಕೆ ವಿದ್ವಾಂಸರು ಉತ್ತರ ಹುಡುಕಬೇಕಾಗಿದೆ ಎಂದು ಹಿರಿಯ ವಿದ್ವಾಂಸರಾದ ಡಾ. ಸುಬ್ರಹ್ಮಣ್ಯ ಸೂಚಿಸಿದರು.



ಹಳಗನ್ನಡ ಕಾವ್ಯಭ್ಯಾಸ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದ ಅವರು ಇಂದಿನ ಯುವಪೀಳಿಗೆಯಲ್ಲಿ ಕಾಲೇಜು ಅಧ್ಯಾಪಕರು ಪಂಪ, ರನ್ನ, ಕುಮಾರವ್ಯಾಸರ ಕಾವ್ಯಗಳನ್ನು ಓದಿ ಅರ್ಥೈಸಲಾರದ ಸ್ಥಿತಿಯಲ್ಲಿದ್ದಾರೆ. ಈ ಬೌದ್ಧಿಕ ತಿಳಿವಳಿಕೆಗೆ ಎಲ್ಲಿ ಏನು ಕೊರತೆಯಾಗಿದೆ ಎಂಬುದಕ್ಕೆ ಹಿರಿಯ ವಿದ್ವಾಂಸರು ಉತ್ತರ ಹುಡುಕಬೇಕು ಎಂದು ಹೇಳಿದರು.

ನಗರದ ಬಿಎಂಶ್ರೀ ಪ್ರತಿಷ್ಠಾನ ಹಳಗನ್ನಡ ತರಬೇತಿ ನೀಡುತ್ತಿರುವುದು ಉತ್ತಮವಾದ ಕಾರ್ಯವಾಗಿದೆ. ಎಂದು ಶ್ಲಾಘಿಸಿದರು.

ಸಮಾರಂಭದಲ್ಲಿ ಭಾಗವಹಿಸಿ ಪ್ರಾಚೀನ ಹಸ್ತಪ್ರತಿಗಳ ಪ್ರದರ್ಶನ ಉದ್ಘಾಟಿಸಿದ ನಾಡೋಜ ಜಿ. ನಾರಾಯಣ ಅವರು ಮಾತನಾಡಿ ಪ್ರಾಚೀನ ಹಸ್ತಪ್ರತಿಗಳು ನಾಡಿನ ಆಸ್ತಿಯಾಗಿವೆ. ಇವುಗಳನ್ನು ಹೊಂದಿರುವವರು ತಮ್ಮ ಸ್ವಂತ ಆಸ್ತಿ ಮಾಡಿಕೊಂಡು ಹಾಳು ಮಾಡದೆ ಇಂತಹ ಸಂಸ್ಥೆಗಳಿಗೆ ಕೊಟ್ಟು ಉಳಿಸುವ ಮನಸ್ಸು ಮಾಡಬೇಕು ಎಂದು ಕೇಳಿಕೊಂಡರು, ಈ ದಿಶೆಯಲ್ಲಿನ ಬಿಎಂಶ್ರೀ ಪ್ರತಿಷ್ಠಾನದ ಕಾರ್ಯವನ್ನು ಶ್ಲಾಘಿಸಿದರು.

ಪ್ರತಿಷ್ಠಾನದ ಸಿರಿ ಸಂಗೀತ ಕಾರ್ಯಕ್ರಮದಲ್ಲಿ ಯುವ ಸಂಗೀತ ಕಲಾವಿದರು ಹೆಚ್ಚು ಹೆಚ್ಚು ಭಾಗವಹಿಸಬೇಕು ಎಂದು ಅಧ್ಯಕ್ಷರಾದ ಡಾ.ಪಿ.ವಿ.ನಾರಾಯಣ ಸೂಚಿಸಿದರು.

ಸಿರಿ ಸಂಗೀತ ಪ್ರತಿಷ್ಠಾನ ಪ್ರತಿ ತಿಂಗಳ ಸಾಂಸ್ಕೃತಿಕ ಕಾರ್ಯಕ್ರಮ ಮಾಲೆಯಾಗಿದ್ದು ಕೀರ್ತನೆ ವಚನ, ಭಾವಗೀತೆ, ತತ್ವಪದ, ಜಾನಪದ, ಗೀತೆ ಮತ್ತು ಗಮಕ ಸಂಗೀತಗಳನ್ನು ನಡೆಸುವುದಾಗಿದೆ. ಈ ತಿಂಗಳ ಕಾರ್ಯಕ್ರಮವನ್ನು ವಿದುಷಿ ಅಂಬುಜ ಪ್ರಕಾಶ್ ನಡೆಸಿಕೊಟ್ಟರು, ಡಾ. ನಾ. ಗೀತಾಚಾರ್ಯರು ಪ್ರತಿಷ್ಠಾನದ ಚಟುವಟಿಕೆಗಳನ್ನು ವಿವರಿಸಿದರು.

೧೬/೧೦/೦೮, ಸಂಯುಕ್ತ ಕರ್ನಾಟಕ

ಬಿ.ಎಂ.ಶ್ರೀ. ಪ್ರತಿಷ್ಠಾನದ ಈಚಿನ ಪ್ರಕಟಣೆಗಳು


೧. ಇಂಗ್ಲಿಷ್‌ಗೀತೆಗಳು–	ಶ್ರೀ ಪುನರ್‌ಮುದ್ರಣ (ಮೂಲ ಆಂಗ್ಲ ಕವಿತೆಗಳೊಂದಿಗೆ)	೧೦೦-೦೦
೨. ಹೊಸಗನ್ನಡ ವ್ಯಾಕರಣ	ಡಾ|| ಟಿ.ವಿ. ವೆಂಕಟಾಚಲ ಶಾಸ್ತ್ರೀ (ಪುನರ್‌ಮುದ್ರಣ)	೧೦೦-೦೦
೩. ಕನ್ನಡವೆಂಬ ಕನ್ನಡಿಯಲ್ಲಿ	ಅನುವಾದ (ಇಂಗ್ಲಿಷ್ ಕವಿತೆಗಳ ಅನುವಾದ ಸ್ಪರ್ಧೆಯ ವಿಜೇತ ಕವನಗಳು)	೩೦-೦೦
೪. ಶ್ರೀಸಾಹಿತ್ಯ ಮಣಿಮಾಲೆ	ಸಂ: ಡಾ|| ಟಿ.ವಿ. ವೆಂಕಟಾಚಲಶಾಸ್ತ್ರಿ (ಬಿ.ಎಂ.ಶ್ರೀ ಅವರ 'ಶ್ರೀ ಸಾಹಿತ್ಯ'ದಲ್ಲಿಲ್ಲದ ಅಪ್ರಕಟಿತ ಲೇಖನಗಳ ಸಂಕಲನ)	೧೭೫-೦೦
೫. ವೆಂಕಟದಾಸರು ಮತ್ತು ಇತರ ಅದ್ವೈತ ಹರಿದಾಸರ ಕೀರ್ತನೆಗಳು	ಸಂ: ನಾ. ಗೀತಾಚಾರ್ಯ	೭೫-೦೦
೬. ಡಿ.ಎಲ್.ಎನ್. ಅವರ ಹೆಚ್ಚಿನ ಬರಹಗಳು, ಭಾಷಣಗಳು	ಸಂ: ಡಾ|| ಟಿ.ವಿ. ವೆಂಕಟಾಚಲ ಶಾಸ್ತ್ರೀ	೨೦೦-೦೦
೭. ಕುಂತಿಯ ಅಂತರಾಳ	ಸಂ: ಶ್ರೀಮತಿ ತಾರಾಮೂರ್ತಿ	೫೦-೦೦
೮. ಕನ್ನಡದ ಶರಣ ಎಂ.ಆರ್.ಶ್ರೀ.	ಸಂ: ಪ್ರೊ. ನಾ. ಗೀತಾಚಾರ್ಯ	೩೦-೦೦
೯. ಕೆ.ವಿ. ರಾಘವಾಚಾರ್ ಜೀವನ–ಸಾಧನೆ	(ಸಿದ್ಧತೆಯಲ್ಲಿ)	
೧೦. ಕನ್ನಡ ಸಾಹಿತ್ಯದಲ್ಲಿ ವಿಶಿಷ್ಟಾದ್ವೈತ	(ಸಿದ್ಧತೆಯಲ್ಲಿ)	

ಅಭಿನಂದನೆಗಳು

- **ಬೂಕರ್ ಪ್ರಶಸ್ತಿ:** ಕನ್ನಡಿಗ ಶ್ರೀ ಅರವಿಂದ ಅಡಿಗ ಅವರ ಇಂಗ್ಲೀಷ್ ಕೃತಿ ದಿ'ವೈಟ್ ಟೈಗರ್'ಗೆ ಈ ಸಾಲಿನ ಪ್ರತಿಷ್ಠಿತ ಬೂಕರ್ ಪ್ರಶಸ್ತಿ ಪ್ರಾಪ್ತವಾಗಿದೆ. ಇವರು ಬೂಕರ್ ಪ್ರಶಸ್ತಿ ಪಡೆದ ಐದನೆಯ ಭಾರತೀಯವರಾಗಿದ್ದಾರೆ (ವಿ.ಎಸ್.ನೈಪಾಲ್ (೧೯೭೧), ಸಲ್ಮಾನ್‌ರಶ್ದಿ (೧೯೮೧), ಅರುಂಧತಿರಾಯ್ (೧೯೯೭) ಕಿರಣ್‌ದೇಸಾಯಿ (೨೦೦೬)
- **ಜಾನಪದ ಅಕಾಡೆಮಿ ಅಧ್ಯಕ್ಷತೆ (೨೦೦೮):** ಕರ್ನಾಟಕ ಸರ್ಕಾರ ಶ್ರೀ. ಗೊ.ರು.ಚನ್ನಬಸಪ್ಪ ಅವರನ್ನು ಜಾನಪದ ಅಕಾಡೆಮಿಯ ಅಧ್ಯಕ್ಷರಾಗಿ ನೇಮಿಸಿ ಆದೇಶ ಹೊರಡಿಸಿದೆ.
- **ನೃಪತುಂಗ ಪ್ರಶಸ್ತಿ (೨೦೦೮):** ಕನ್ನಡ ಸಾಹಿತ್ಯ ಪರಿಷತ್ತು ಮತ್ತು ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ನೀಡುವ ಈ ಪ್ರತಿಷ್ಠಿತ ಪ್ರಶಸ್ತಿ ಖ್ಯಾತ ಪತ್ರಕರ್ತ, ಸ್ವಾತಂತ್ರ್ಯ ಹೋರಾಟಗಾರ ನಾಡೋಜ ಡಾ. ಪಾಟೀಲಪುಟ್ಟಪ್ಪ ಅವರಿಗೆ ಸಂದಿದೆ.
- **ಭೂಸನೂರು ಮಠ ಪ್ರಶಸ್ತಿ (೨೦೦೮):** ಪ್ರೊ.ಸಂ.ಶಿ.ಭೂಸನೂರ ಮಠ ಪ್ರತಿಷ್ಠಾನ ನೀಡುವ ಈ ಪ್ರಶಸ್ತಿ ಕರ್ನಾಟಕ ಜಾನಪದ ಅಕಾಡೆಮಿ ಅಧ್ಯಕ್ಷ ಶ್ರೀ ಗೊ.ರು.ಚನ್ನಬಸಪ್ಪ ಅವರಿಗೆ ಸಂದಿದೆ.
- **ಭಾರತರತ್ನ ಪ್ರಶಸ್ತಿ (೨೦೦೮):** ಕರ್ನಾಟಕದ ಹಿಂದೂಸ್ತಾನಿ ಗಾಯಕ ಶ್ರೀ ಭೀಮಸೇನ ಜೋಶಿ ಅವರಿಗೆ ನೀಡಲಾಗಿದೆ.
- **'ಭಾಷಾ ಭಾರತಿ' ಅಧ್ಯಕ್ಷತೆ :** ಡಾ. ಪ್ರಧಾನ್ ಗುರುದತ್ತ ಅವರನ್ನು ಈ ಸಂಸ್ಥೆಯ ಅಧ್ಯಕ್ಷರನ್ನಾಗಿ ಸರಕಾರ ನೇಮಿಸಿದೆ.
- **ಡಾಕ್ಟರೇಟ್ ಪ್ರಶಸ್ತಿ :** ಕರ್ನಾಟಕದ ಮುಖ್ಯ ಮಂತ್ರಿ ಶ್ರೀ ಬಿ.ಎಸ್. ಯಡಿಯೂರಪ್ಪ ಅವರಿಗೆ ಅಮೆರಿಕಾದ ಮಿಚಿಗನ್ ರಾಜ್ಯದ ಸಗಿನಾವೊ ವಿಶ್ವವಿದ್ಯಾಲಯ ಗೌರವಡಾಕ್ಟರೇಟ್ ನೀಡಿ ಪುರಸ್ಕರಿಸಿದೆ.
- **ಪು.ತಿ.ನ. ಕಾವ್ಯ ಪುರಸ್ಕಾರ (೨೦೦೭):** ಶ್ರೀ ಜಿ.ಎನ್.ಮೋಹನ್ ಅವರ 'ಪ್ರಶ್ನೆಗಳಿರುವುದು ಷೇಕ್ಸ್‌ಪಿಯರ್‌ನಿಗೆ' ಕೃತಿಗೆ ಮತ್ತು ಶ್ರೀ ಬಸವರಾಜ್ ಒಕ್ಕುಂದ ಅವರ 'ಒಡೆಯಲಾರದ ಪ್ರತಿಮೆ' ಕೃತಿಗೆ ಜಂಟಿಯಾಗಿ ಈ ಪ್ರಶಸ್ತಿಯನ್ನು ನೀಡಲಾಗಿದೆ.
- **ಭಾಷಾ ಸಮ್ಮಾನ್ ಪ್ರಶಸ್ತಿ :** ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರೊ.ಎಸ್. ಷಟ್ಪರ್ ಮತ್ತು ಮೈಥಿಲಿ ಲೇಖಕ ಶಶಿನಾಥ ಝಾ ಅವರಿಗೆ ೨೦೦೭ನೇ ಸಾಲಿನ ಈ ಪ್ರಶಸ್ತಿಯನ್ನು ಘೋಷಿಸಿದೆ.
- **ಕೇಂದ್ರ ಸಾಹಿತ್ಯ ಅಕಾಡೆಮಿ ಬಹುಮಾನ (೨೦೦೮):** ಕೇಂದ್ರ ಸಾಹಿತ್ಯ ಅಕಾಡೆಮಿ ಕನ್ನಡದ ಖ್ಯಾತ ಕಾದಂಬರಿಕಾರ ಶ್ರೀ ಶ್ರೀನಿವಾಸ ವೈದ್ಯ ಅವರ 'ಹಳ್ಳ ಬಂತು ಹಳ್ಳ' ಕಾದಂಬರಿಗೆ ನೀಡಿದೆ.
- **ವಿಶ್ವಮಾನವ ಪ್ರಶಸ್ತಿ :** ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಸಾಹಿತಿ ಶ್ರೀಮನುಬಳಿಗಾರ್ ಅವರಿಗೆ, ದೇ.ಜ.ಗೌ ಟ್ರಸ್ಟ್ ಈ ಪ್ರಶಸ್ತಿ ನೀಡಿ ಪುರಸ್ಕರಿಸಿದೆ.
- **ಸಾವಿತ್ರಮ್ಮ ದೇಜಗೌ ಮಹಿಳಾ ಪ್ರಶಸ್ತಿ:** ಕುವೆಂಪು ಅವರ ಪುತ್ರಿ ಲೇಖಕಿ ತಾರಿಣಿ ಚಿದಾನಂದಗೌಡ ಅವರಿಗೆ ನೀಡಿ ಪುರಸ್ಕರಿಸಿದೆ.
- **ದಿ॥ ಎಚ್.ಕೆ. ವೀರಣ್ಣಗೌಡ ಪ್ರಶಸ್ತಿ:** ತರಂಗವಾರ ಪತ್ರಿಕೆ ಸಂಪಾದಕಿ ಶ್ರೀಮತಿ ಸಂಧ್ಯಾ ಎಸ್.ಪೈ ಅವರಿಗೆ ಸಂದಿದೆ.


ಮೇಲ್ಕಂಡ ಎಲ್ಲಾ ಸನ್ಮಾನ್ಯರುಗಳಿಗೆ ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ ಹಾರ್ದಿಕ ಅಭಿನಂದನೆಯೊಡನೆ ಶುಭಾಶಯ ಕೋರುತ್ತದೆ.

ಗ್ರಂಥ ಪರಿಚಯ




ಪ್ರೊ. ಡಿ.ಎಲ್. ನರಸಿಂಹಾಚಾರ್ಯರ ಹೆಚ್ಚಿನ ಬರಹಗಳು, ಭಾಷಣಗಳು : ಸಂಪಾದಕರು: ಡಾ॥ ಟಿ.ವಿ. ವೆಂಕಟಚಲಶಾಸ್ತ್ರೀ, ಪ್ರಕಾಶಕರು: ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ. ಬೆಂಗಳೂರು-೧೯, ಪುಟಗಳು: ೨೯೬; ಬೆಲೆ:ರೂ ೨೦೦/- ಮುದ್ರಣ: ಪ್ರಥಮ-೨೦೦೮

'ಸಂಶೋಧನೆ ಎಂದರೆ ಹುಡುಕಾಟ. ಕಣ್ಣ ಮುಂದಿಲ್ಲದಿರುವುದರ ಸುಳುಹು ಹಿಡಿದು ಅದನ್ನು ಹೊರತೆಗೆಯುವುದು' ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದ ಅಧ್ಯಕ್ಷರ ಅಭಿಪ್ರಾಯ. ಈ ಕಷ್ಟಕರವಾದ ಕೆಲಸವನ್ನು ಯಶಸ್ವಿಯಾಗಿ ನಿರ್ವಹಿಸಿರುವ ಗೌರವ ಡಾ॥ ಟಿ.ವಿ. ವೆಂಕಟಾಚಲಶಾಸ್ತ್ರೀ ಗಳವರದು. ಪ್ರೊ. ಡಿ.ಎಲ್.ಎನ್. ಅವರ ಇದುವರೆಗೆ ಪ್ರಕಟಗೊಳ್ಳದೆ ಇದ್ದ ಮೌಲ್ಯಾಧಾರಿತ ಬರಹಗಳು ಮತ್ತು ಭಾಷಣಗಳನ್ನು ಅವರ ಸಾಹಿತ್ಯ ಭಂಡಾರದಿಂದ ಹೆಕ್ಕಿ ತೆಗೆದು ಗ್ರಂಥರೂಪದಲ್ಲಿ ಹೊರತರುವ ಸಾಹಸ ಮಾಡಿರುತ್ತಾರೆ. ಲೇಖನಗಳು, ಭಾಷಣಗಳು, ಮುನ್ನುಡಿಗಳು, ಗ್ರಂಥ ಸಂಪಾದನೆ, ಲಲಿತ ಪ್ರಬಂಧಗಳು, ಕವಿತೆಗಳು; ತರಗತಿಯ ಪಾಠಗಳು ಈ ಆರು ಭಾಗಗಳಡಿ ಅಮೂಲ್ಯ ಮಾಹಿತಿಯನ್ನು ದಾಖಲಿಸಿದ್ದಾರೆ. ಇದೊಂದು ಸಂಗ್ರಹ ಯೋಗ್ಯ ಕೃತಿ. ಸಾಹಿತ್ಯಾಸಕ್ತರಿಗೆ ತೃಪ್ತಿ ತರುವಂತಹ ಪುಸ್ತಕ.



ಕುಂತಿಯ ಅಂತರಾಳ : ಲೇಖಕರು: ಶ್ರೀಮತಿ ತಾರಾಮೂರ್ತಿ. ಪ್ರಕಾಶಕರು ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ, ಬೆಂಗಳೂರು-೧೯, ಪುಟಗಳು XVI+96 ಬೆಲೆ ರೂ ೫೦/- ಪ್ರಕಟಣೆ : ಪ್ರಥಮ ಮುದ್ರಣ. ೨೦೦೮.

ಪ್ರೊ. ವೆಂಕಣ್ಣಯ್ಯನವರ ಕುಟುಂಬಕ್ಕೆ ಸೇರಿದ ಶ್ರೀಮತಿ ತಾರಾಮೂರ್ತಿರವರು ಮಹಾಭಾರತದ ಅನೇಕ ಸೂಕ್ಷ್ಮ ವಿಚಾರಗಳನ್ನು ಇಲ್ಲಿ ವಿಮರ್ಶೆ ಮಾಡಿದ್ದಾರೆ. ಇವರು ಕುಂತಿಯ ಅಂತರಾಳ ಹೊಕ್ಕು ವಿಶಿಷ್ಟ ದೃಷ್ಟಿಕೋನದಿಂದ ಮಹಾಭಾರತದ ಕಥೆಯನ್ನು ವಿಶ್ಲೇಷಿಸಿದ್ದಾರೆ. ನಿರೂಪಣೆಯಲ್ಲಿ ಹೊಸತನ ಮೆರೆದಿದೆ. ನಿರಾಳವಾಗಿ ಓದಿಸಿಕೊಂಡು ಹೋಗುವ ಈ ಕಥಾನಕ ಸರ್ವರಿಗೂ ಇಷ್ಟವಾಗುವುದರಲ್ಲಿ ಸಂದೇಹವಿಲ್ಲ.




ಗ್ರೀಕ್ ನಾಟಕಗಳು : ಅನುವಾದ: ಪ್ರೊ. ಕ.ವೆಂ. ರಾಘವಾಚಾರ್, ಪ್ರಕಾಶಕರು: ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ ಕನ್ನಡಭವನ, ಬೆಂಗಳೂರು–೫೬೦೦೦೨. ಪುಟಗಳು. XV + 241. ಬೆಲೆ: ರೂ ೮೦/– ಪ್ರಕಟಣೆ : ಮುದ್ರಣ ೨೦೦೭.

ಸೊಫೊಕ್ಲೀಸ್ ಮಹಾಕವಿಯ ಮೂರು ಪ್ರಸಿದ್ಧ ನಾಟಕಗಳಾದ (i) ಒಯ್ಡಿ ಪೌಸ್ ಕೊಲೊನೊಸ್ಸಿನಲ್ಲಿ (ii) ಎಲೆಕ್ತ್ರ (iii) ಫಿಲೋಕ್ತೇತೇಸ್‌ಗಳನ್ನು ಮೂಲ ಗ್ರೀಕ್ ಭಾಷೆಯಿಂದಲೇ ಕನ್ನಡಕ್ಕೆ ಪ್ರೊ. ಕ.ವೆಂ. ರಾಘವಾಚಾರ್ ಅನುವಾದ ಮಾಡಿರುವುದು ಈ ಕೃತಿಯ ವೈಶಿಷ್ಟ್ಯ. ಪ್ರಧಾನ ಸಂಪಾದಕರಾದ ಡಾ॥ ಪ್ರಧಾನ ಗುರುದತ್ ಅವರು ಬಹಳ ಆಸ್ಥೆ ವಹಿಸಿ ಇದನ್ನು ಬಹಳ ಅಚ್ಚುಗಟ್ಟಾಗಿ ಮುದ್ರಿಸಿ ಸುವರ್ಣ ಕರ್ನಾಟಕ ಆಚರಣೆಯ ಸಂದರ್ಭದಲ್ಲಿ ಸುವರ್ಣ ಅನುವಾದಮಾಲೆಯ ಅಂಗವಾಗಿ ಹೊರತಂದಿದ್ದಾರೆ. ಮೂಲ ಗ್ರೀಕ್ ಲೇಖಕ ಸೊಫೊಕ್ಲೀಸ್‌ನ ಪರಿಚಯ ರುದ್ರ ನಾಟಕಗಳ ಹುಟ್ಟು ಬೆಳವಣಿಗೆ ಓದುಗರಿಗೆ ಪ್ರರಕ ಮಾಹಿತಿಯನ್ನು ನೀಡುತ್ತದೆ. ಸಂಗ್ರಹ ಯೋಗ್ಯಕೃತಿ.




ಕನ್ನಡ ನಾಡಿನ ಸ್ಮರಣೀಯ ಮಹನೀಯರು: ಲೇಖಕರು: ಎಸ್.ವಿ.ಶ್ರೀನಿವಾಸರಾವ್ ಪ್ರಕಾಶಕರು: ಪ್ರತಿಭಾ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್, ಹನುಮಂತನಗರ, ಬೆಂಗಳೂರು–೧೯. ಪುಟಗಳು: ೨೧೨, ಬೆಲೆ : ರೂ.೧೩೫.೦೦ . ಪ್ರಕಟಣೆ : ೨೦೦೭.

ಇದೊಂದು ವಿಶಿಷ್ಟ ರೀತಿಯ ಮಾಹಿತಿಕೋಶ. ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರು, ಕ.ಸಾ.ಪ. ಅಧ್ಯಕ್ಷರು, ಅಕಾಡೆಮಿ, ಪ್ರಾಧಿಕಾರಗಳ ಅಧ್ಯಕ್ಷರು, ಜ್ಞಾನಪೀಠ, ಪಂಪ, ದಾನಚಿಂತಾಮಣಿ ಅತ್ತಿಮಬ್ಬೆ, ಮ್ಯಾಗ್ಸೆಸೆ, ರೈಟ್ ಲೈವ್ಲಿಹುಡ್, ಪ್ರಶಸ್ತಿ, ರಾಜ್ಯ ಹಾಗೂ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತರು, ಇವರುಗಳ ವಿವರಗಳ ಜೊತೆಯಲ್ಲಿ ಕನ್ನಡ ಪರಿಷತ್ತಿನ ಕಿರುಪರಿಚಯ, ಕರ್ನಾಟಕ ಮುಖ್ಯಮಂತ್ರಿಗಳ ಪರಿಚಯ ಮುಂತಾಗಿ ನೂರಾರು ಪ್ರತಿಷ್ಠಿತರ ಮಾಹಿತಿ ಒಂದೆಡೆ ಲಭ್ಯವಾಗುವಂತೆ ಲೇಖಕರು ಬಹಳ ಆಸ್ಥೆ ವಹಿಸಿ ಸಂಗ್ರಹಿಸಿ ನೀಡಿದ್ದಾರೆ. ಇದೊಂದು ಮಾಹಿತಿಯ ಆಕರ ಗ್ರಂಥವಾಗಿ ಸಂಗ್ರಹ ಯೋಗ್ಯವಾಗಿ, ಎಲ್ಲರಿಗೂ ಉಪಯುಕ್ತವಾಗುವುದರಲ್ಲಿ ಸಂದೇಹವಿಲ್ಲ.



ಆಂಡಾಳ್ ಕನ್ನಡ ತಿರುಪ್ಪಾವೈ : ಅನುವಾದ : ಡಾ॥ ನಾ.ಗೀತಾಚಾರ್ಯ, ಪ್ರಕಾಶಕರು : ನಾರಾಯಣ ಸಂಸ್ಕೃತಿ ಕೇಂದ್ರ, ಬೆಂಗಳೂರು. ಪುಟಗಳು: xxxii + 54=86 ಬೆಲೆ: ರೂ.೫೦/– ಪ್ರಕಟಣೆ: ೨೦೦೮.

ಹರಿದಾಸಸಾಹಿತ್ಯಕ್ಷೇತ್ರಕ್ಕೆ ವಿಶಿಷ್ಟಾದ್ವೈತ ವಿದ್ವಾಂಸರ ಕೊಡುಗೆ ಗಣನೀಯವಾದದ್ದು ಎಂದು ತಮ್ಮ ಹಲವಾರು ಕೃತಿಗಳ ಮೂಲಕ ಪ್ರತಿಪಾದಿಸುತ್ತಿರುವ ಡಾ॥ ನಾ. ಗೀತಾಚಾರ್ಯ 'ಆಂಡಾಳ್ ಕನ್ನಡ ತಿರುಪ್ಪಾವೈ' ಕೃತಿಯ ಮೂಲಕ ತಮಿಳಿನ ಪ್ರಸಿದ್ಧ ಕೃತಿ 'ತಿರುಪ್ಪಾವೈ'ಯನ್ನು ಮೂಲಕ್ಕೆ ಕಿಂಚಿತ್ತೂ ಚ್ಯುತಿಬಾರದಂತೆ ಮೂಲದೊಡನೆ ಅದರ ಪದ್ಯ/ಗದ್ಯಾನುವಾದವನ್ನು ನೀಡಿದ್ದಾರೆ. ಇದೇ ಕನ್ನಡಭಾಷೆಗೆ ನೀಡಿರುವ ವಿಶೇಷ ಕೊಡುಗೆಯಾಗಿದೆ 'ತಮಿಳು ಬಾರದ ಶ್ರೀವೈಷ್ಣವಭಕ್ತರು ಈ ಗೀತೆಯನ್ನು ಪಾರಾಯಣ ಗೀತೆಯನ್ನಾಗಿಯೂ ಅನುಸಂಧಾನ ಮಾಡಬಹುದಾಗಿದೆ' ಎನ್ನುವ ವಿದ್ವಾನ್ ರಘುಸುತರ ಮಾತು ಈ ಕೃತಿಯ ಮೌಲಿಕತೆಯನ್ನು ಎತ್ತಿ ತೋರಿಸುತ್ತಿದೆ. ವ್ರತ, ಪೂಜೆ, ಭಜನೆಗೆ ಯೋಗ್ಯವಾಗಿರುವ ಕೃತಿ ಸಂಗ್ರಹ ಯೋಗ್ಯವಾಗಿದೆ.



ಅಧಿಕಾರ ಮೀಮಾಂಸೆ : ಮೂಲ ಬರ್ಟ್ರಂಡ್ ರಸೆಲ್. ಅನುವಾದ : ಡಾ॥ ಪಿ.ವಿ. ನಾರಾಯಣ : ಪ್ರಕಾಶಕರು : ವಸಂತ ಪ್ರಕಾಶನ, ೩೬೦, ೧೦ಬಿ ಮೇನ್, ಜಯನಗರ ೩ನೇ ಬ್ಲಾಕ್, ಬೆಂಗಳೂರು–೧೧. ಪುಟಗಳು ೨೬೩ + IV = ೨೬೭. ಬೆಲೆ : ರೂ. ೧೨೫/– ಪ್ರಕಟಣೆ : ಪ್ರಥಮ ಮುದ್ರಣ ೨೦೦೭.

ಬರ್ಟ್ರಂಡ್‌ರಸಲರು ವೈಚಾರಿಕತೆ ಹಾಗೂ ಸಾಮಾಜಿಕ ಕಳಕಳಿಯ ವಿಚಾರ ಮಂಡನೆಗೆ ಖ್ಯಾತರಾದವರು. ಬರ್ಟ್ರಂಡ್ ರಸಲರ ಅಭಿಮಾನಿಯಾಗಿರುವ ಡಾ॥ ನಾರಾಯಣ ಅವರು ಹಲವು ಕೃತಿಗಳನ್ನು ಈಗಾಗಲೇ ಅನುವಾದಿಸಿದ್ದಾರೆ. ಈ ಅಧಿಕಾರ ಮೀಮಾಂಸೆ 'ರಹಲ್'ರ ಎ. ನ್ಯೂ ಸೋಷಿಯಲ್ ಅನಾಲಿಸಿಸ್' ಕೃತಿಯ ಕನ್ನಡಾನುವಾದ. ಅಧಿಕಾರದಾಹ ಮನುಷ್ಯನನ್ನು ಬಿಡಲಾರದೆ ಸದಾ ಕಾಡುತ್ತಿರುವ ಪೀಡೆ ಎಂಬುದು ಸಕಾರಣವಾಗಿ ಈ ಕೃತಿಯಲ್ಲಿ ವಿಶ್ಲೇಷಿಸಲ್ಪಟ್ಟಿದೆ. ಮೌಲಿಕ ವಿಷಯ ಆಕರ್ಷಕ ರೀತಿಯಲ್ಲಿ ವಿವರಿಸಲ್ಪಟ್ಟಿರುವುದು ಈ ಕೃತಿಯ ವೈಶಿಷ್ಟ್ಯತೆ.

❑

ತೆರೆದ–ಅಂಚೆ

<u>ಅಚ್ಚಾದ ಪುಸ್ತಕ</u>

ಶ್ರೀಮತಿ/ಶ್ರೀ..

....

....

ವಿಳಾಸ
ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ
ಬಿ.ಎಂ.ಶ್ರೀ. ಕಲಾಭವನ, ೩ನೇ ಮುಖ್ಯರಸ್ತೆ
ನರಸಿಂಹರಾಜ ಕಾಲೋನಿ
ಬೆಂಗಳೂರು – ೧೯
ದೂರವಾಣಿ : ೨೬೬೧೫೮೭೭

ಮುದ್ರಕರು : ಇಳಾ ಮುದ್ರಣ, ನಂ. ೩೬, ೪೦ ಅಡಿ ರಸ್ತೆ, ರಾಘವನಗರ, ನ್ಯೂ ಟಿಂಬರ್‌ಯಾರ್ಡ್ ಲೇಔಟ್, ಬೆಂಗಳೂರು – ೨೬. ✆ : ೨೬೭೫೭೧೯೫

'ವಾರ್ತಾಪತ್ರ' ಪ್ರಾಯೋಜಕರು: ಇಳಾ ಮುದ್ರಣ, ಬೆಂಗಳೂರು–೨೬.